**All India Radio: Bangalore**
**National Bulletins In Kannada**
**12.07.2025 / 19.35 hrs**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**<><*<><>*><>**

ಮುಖ್ಯಾಂಶಗಳು

೧. ದೇಶಾದ್ಯಂತ ೪೭ ಸ್ಥಳಗಳಲ್ಲಿ ನಡೆದ ೧೬ನೇ ಉದ್ಯೋಗ ಮೇಳ; ಪ್ರಧಾನಿಯವರಿಂದ ವರ್ಚುವಲ್ ಮೂಲಕ ೫೧ ಸಾವಿರಕ್ಕೂ ಹೆಚ್ಚು ನೇಮಕಾತಿ ಪತ್ರ ವಿತರಣೆ

೨. ಅಹಮದಾಬಾದ್ ವಿಮಾನ ದುರಂತ ಪ್ರಕರಣ; ಪ್ರಾಥಮಿಕ ವರದಿ ಬಿಡುಗಡೆ ಮಾಡಿದ ವಿಮಾನ ಅಪಘಾತ ತನಿಖಾ ಬ್ಯೂರೋ- ಎಎಐಬಿ

೩. ವಿಂಬಲ್ಡನ್ ಗ್ರ್ಯಾನ್ ಸ್ಲ್ಯಾಮ್ ಟೆನಿಸ್ ಟೂರ್ನಿ; ಮಹಿಳಾ ಸಿಂಗಲ್ಸ್ ವಿಭಾಗದ ಫೈನಲ್‌ನಲ್ಲಿಂದು ಇಗಾ ಸ್ವಿಯಾಟೆಕ್ - ಅಮಾಂಡಾ ಅನಿಸಿಮೋವಾ ಹಣಾಹಣಿ

೪. ಆಂಡರ್ಸನ್-ತೆಂಡೂಲ್ಕರ್ ಟ್ರೋಫಿ; ಮೂರನೇ ಟೆಸ್ಟ್ ಕ್ರಿಕೆಟ್‌ನಲ್ಲಿಂದು ಭಾರತದ ಮೊದಲ ಇನ್ನಿಂಗ್ಸ್ ಪ್ರಗತಿಯಲ್ಲಿ; ಕೆ.ಎಲ್.ರಾಹುಲ್ ಶತಕ

**<><*<><>*><>**

ದೇಶದಾದ್ಯಂತ ೪೭ ಸ್ಥಳಗಳಲ್ಲಿ ಇಂದು ನಡೆದ ೧೬ನೇ ಉದ್ಯೋಗ ಮೇಳದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು, ವಿವಿಧ ಸರ್ಕಾರಿ ಇಲಾಖೆಗಳು ಮತ್ತು ಸಂಸ್ಥೆಗಳಲ್ಲಿ ಹೊಸದಾಗಿ ನೇಮಕಗೊಂಡ ಯುವ ಉದ್ಯೋಗಿಗಳಿಗೆ ವರ್ಚುವಲ್ ಮೂಲಕ ೫೧ ಸಾವಿರಕ್ಕೂ ಹೆಚ್ಚು ನೇಮಕಾತಿ ಪತ್ರಗಳನ್ನು ವಿತರಿಸಿದರು. ನಂತರ ಮಾತನಾಡಿದ ಪ್ರಧಾನಿ, ಜನಸಂಖ್ಯೆ ಮತ್ತು ಪ್ರಜಾಪ್ರಭುತ್ವವು ಭಾರತದ ಎರಡು ಅಪರಿಮಿತ ಶಕ್ತಿಗಳಾಗಿವೆ. ಇದನ್ನು ಜಗತ್ತು ಕೂಡ ಒಪ್ಪಿಕೊಂಡಿದೆ. ಉದ್ಯೋಗ ಮೇಳದಿಂದ ಈಗಾಗಲೇ ಲಕ್ಷಾಂತರ ಯುವಕರು ಕೇಂದ್ರ ಸರ್ಕಾರದಲ್ಲಿ ಉದ್ಯೋಗಗಳನ್ನು ಪಡೆದುಕೊಂಡಿದ್ದಾರೆ. ಈ ಯುವಕರು ರಾಷ್ಟ್ರ ನಿರ್ಮಾಣದಲ್ಲಿ ಪ್ರಮುಖ ಪಾತ್ರ ವಹಿಸಲಿದ್ದಾರೆ ಎಂದರು. ದೇಶದಲ್ಲಿ ಅಭಿವೃದ್ಧಿಪಡಿಸಲಾಗುತ್ತಿರುವ ನವೋದ್ಯಮಗಳು, ನಾವೀನ್ಯತೆ ಮತ್ತು ಸಂಶೋಧನೆಯ ಪರಿಸರ ವ್ಯವಸ್ಥೆಯು ದೇಶದ ಯುವಕರ ಸಾಮರ್ಥ್ಯವನ್ನು ಹೆಚ್ಚಿಸಿವೆ ಎಂದು ಪ್ರಧಾನಿ ಹೇಳಿದರು. ದೇಶಾದ್ಯಂತ ಆಯ್ಕೆಯಾದ ಅಭ್ಯರ್ಥಿಗಳು ರೈಲ್ವೆ, ಗೃಹ ವ್ಯವಹಾರಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಕಾರ್ಮಿಕ ಮತ್ತು ಉದ್ಯೋಗ ಹಾಗೂ ಅಂಚೆ ಇಲಾಖೆ ಸೇರಿದಂತೆ ಇತರೆ ಇಲಾಖೆಗಳು ಮತ್ತು ಸಚಿವಾಲಯಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಉದ್ಯೋಗ ಮೇಳಗಳ ಮೂಲಕ ಇಲ್ಲಿಯವರೆಗೆ ಹತ್ತು ಲಕ್ಷಕ್ಕೂ ಹೆಚ್ಚು ನೇಮಕಾತಿ ಪತ್ರಗಳನ್ನು ನೀಡಲಾಗಿದೆ. ಇದೇ ಸಂದರ್ಭದಲ್ಲಿ ಬೆಂಗಳೂರಿನಲ್ಲಿ ನೈಋತ್ಯ ರೈಲ್ವೆ ಸಹಯೋಗದಲ್ಲಿ ಆಯೋಜಿಸಿದ್ದ ರೋಜ್‌ಗಾರ್ ಮೇಳವನ್ನು ಉದ್ಘಾಟಿಸಿ ಮಾತನಾಡಿದ ಶೋಭಾ ಕರಂದ್ಲಾಜೆ ಭಾರತ ದೇಶ ಯುವ ರಾಷ್ಟ್ರವಾಗಿದೆ. ದೇಶದ ಅಭಿವೃದ್ಧಿಯಲ್ಲಿ ಯುವಕರ ಪಾತ್ರ ಮಹತ್ವದ್ದಾಗಿದ್ದು, ೨೦೪೭ರ ವೇಳೆಗೆ ವಿಕಸಿತ ಭಾರತವನ್ನಾಗಿ ರೂಪಿಸಲು ಯುವಪೀಳಿಗೆಯ ಕೊಡುಗೆ ಅತಿ ಮುಖ್ಯ ಎಂದು ಹೇಳಿದ್ದಾರೆ. ಕರ್ನಾಟಕದ ಹುಬ್ಬಳ್ಳಿಯ ಕೇಶ್ವಾಪುರದ ಆಫೀಸರ್ಸ್ ಕ್ಲಬ್ ನಲ್ಲಿ ನೈರುತ್ಯ ರೈಲ್ವೆ ಸಹಯೋಗದಲ್ಲಿ ಆಯೋಜಿಸಿದ್ದ ವರ್ಚುವಲ್ ಮೂಲಕ ನಡೆದ ರೋಜಗಾರ್ ಮೇಳಕ್ಕೆ ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಚಾಲನೆ

ನೀಡಿದರು. ನಂತರ ಮಾತನಾಡಿದ ಅವರು, ರೋಜ್‌ಗಾರ್ ಮೇಳದ ಮೂಲಕ ೧೦ ವರ್ಷದಲ್ಲಿ ೧೦ ಲಕ್ಷ ಉದ್ಯೋಗ ನೀಡುವ ಗುರಿಯನ್ನು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಹೊಂದಿದ್ದು, ಅದರಂತೆ ರೋಜಗಾರ ಮೇಳದಲ್ಲಿ ಹೊಸದಾಗಿ ನೇಮಕಾತಿ ಹೊಂದಿದ ಅಭ್ಯರ್ಥಿಗಳಿಗೆ ನೇಮಕಾತಿ ಪತ್ರವನ್ನು ವಿತರಣೆ ಮಾಡಲಾಗುತ್ತಿದೆ ಎಂದರು.

**<><*<><>*><>**

ಕಳೆದ ತಿಂಗಳು ೧೨ ರಂದು ಅಹಮದಾಬಾದ್‌ನಲ್ಲಿ ೨೬೦ ಜನ ಮೃತಪಟ್ಟ ಏರ್ ಇಂಡಿಯಾ ವಿಮಾನ ದುರಂತದ ತನಿಖೆಯ ೧೫ ಪುಟಗಳ ಪ್ರಾಥಮಿಕ ವರದಿಯನ್ನು ವಿಮಾನ ಅಪಘಾತ ತನಿಖಾ ಬ್ಯೂರೋ-ಎಎಐಬಿ ಬಿಡುಗಡೆ ಮಾಡಿದೆ. ಬೋಯಿಂಗ್ ೭೮೭-೮ ವಿಮಾನವನ್ನು ಒಳಗೊಂಡ ಏರ್ ಇಂಡಿಯಾ ವಿಮಾನ ಎಐ ೧೭೧ ಅಪಘಾತಕ್ಕೆ ಕಾರಣವಾದ ಘಟನೆಗಳು ಹಾಗೂ ಎಂಜಿನ್ ಪರಿಸ್ಥಿತಿಯನ್ನು ಅವಲೋಕಿಸಿದ ವರದಿಯು, ವಿಮಾನದ ಎಂಜಿನ್‌ಗಳಿಗೆ ಇಂಧನವನ್ನು ಕಡಿತಗೊಳಿಸಲಾಗಿತ್ತು ಎಂದು ಬಹಿರಂಗಪಡಿಸಿದೆ. ಎಎಐಬಿ ತನ್ನ ವರದಿಯಲ್ಲಿ, ವಿಮಾನದ ಎರಡೂ ಎಂಜಿನ್ ಇಂಧನ ನಿಯಂತ್ರಣ ಸ್ವಿಚ್‌ಗಳು ೧ ಸೆಕೆಂಡ್ ಸಮಯದ ಅಂತರದಲ್ಲಿ ಒಂದರ ನಂತರ ಒಂದರಂತೆ 'ರನ್' ನಿಂದ 'ಕಟ್‌ಆಫ್' ಸ್ಥಾನಕ್ಕೆ ಪರಿವರ್ತನೆಗೊಂಡು ಸ್ಥಗಿತಗೊಂಡವು, ಇದರ ಪರಿಣಾಮವಾಗಿ ದುರಂತ ಸಂಭವಿಸಿತು ಎಂದು ವರದಿ ತಿಳಿಸಿದೆ.

ಆರಂಭಿಕ ತನಿಖಾ ವರದಿಯ ಪ್ರಕಾರ, ಪೈಲಟ್‌ಗಳಲ್ಲಿ ಒಬ್ಬರು ಕಾಕ್‌ಪಿಟ್ ವಾಯ್ಸ್ ರೆಕಾರ್ಡರ್‌ನಲ್ಲಿ ಇನ್ನೊಬ್ಬರನ್ನು ಎಂಜಿನ್‌ಗಳಿಗೆ ಇಂಧನ ಪೂರೈಕೆಯನ್ನು ಏಕೆ ಆಫ್ ಮಾಡಿದ್ದೀರಿ ಎಂದು ಕೇಳುವುದು ದಾಖಲಾಗಿದೆ, ಅದಕ್ಕೆ ಪ್ರತ್ಯುತ್ತರವಾಗಿ ಇನ್ನೊಬ್ಬ ಪೈಲಟ್ ತಾನು ಮಾಡಲಿಲ್ಲ ಎಂದು ಪ್ರತಿಕ್ರಿಯಿಸಿದ್ದರು. ಇಂಧನ ನಿಯಂತ್ರಣ ಸ್ವಿಚ್‌ಗಳನ್ನು ನಂತರ ಆನ್ ಮಾಡಲಾಯಿತಾದರೂ ಒಂದು ಎಂಜಿನ್‌ನ ವೇಗವರ್ಧನೆಯನ್ನು ಸ್ಥಿರಗೊಳಿಸಲು ಸಾಧ್ಯವಾಗಲಿಲ್ಲ ಎಂದು ಎಎಐಬಿ ಹೇಳಿದೆ. ವರದಿಯ ಪ್ರಕಾರ, ವಿಮಾನವು ಲಿಫ್ಟ್-ಆಫ್ ಮತ್ತು ಕ್ರ್ಯಾಶ್ ನಡುವಿನ ಅಂತರ ಕೇವಲ ೩೦ ಸೆಕೆಂಡುಗಳಾಗಿತ್ತು. ವಿಮಾನಕ್ಕೆ ಇಂಧನ ತುಂಬಲು ಬಳಸುವ ಬೌಸರ್‌ಗಳು ಮತ್ತು ಟ್ಯಾಂಕ್‌ಗಳಿಂದ ತೆಗೆದ ಇಂಧನ ಮಾದರಿಗಳನ್ನು ನಾಗರಿಕ ವಿಮಾನಯಾನ ನಿರ್ದೇಶನಾಲಯ-ಡಿಜಿಸಿಎ ಪ್ರಯೋಗಾಲಯದಲ್ಲಿ ಪರೀಕ್ಷಿಸಲಾಯಿತು ಮತ್ತು ಅವು ತೃಪ್ತಿಕರವೆಂದು ಕಂಡುಬಂದಿದೆ ಎಂದು ಅದು ಹೇಳಿದೆ. ಎಎಐಬಿ ವರದಿಗೆ ಪ್ರತಿಕ್ರಿಯಿಸಿರುವ ಕೇಂದ್ರ ನಾಗರಿಕ ವಿಮಾನಯಾನ ಸಚಿವ ರಾಮ್ ಮೋಹನ್ ನಾಯ್ಡು, ಇದು ಪ್ರಾಥಮಿಕ ಸಂಶೋಧನೆಗಳನ್ನು ಆಧರಿಸಿದೆ ಮತ್ತು ಅಂತಿಮ ವರದಿ ಬಿಡುಗಡೆಯಾಗುವವರೆಗೆ ಯಾವುದೇ ತೀರ್ಮಾನಗಳಿಗೆ ಬರದಂತೆ ಸಾರ್ವಜನಿಕರಲ್ಲಿ ಮನವಿ ಮಾಡಿದ್ದಾರೆ. ಇದು ಅಂತಿಮ ವರದಿಯಲ್ಲ ಎಂದು ಒತ್ತಿ ಹೇಳಿರುವ ಕೇಂದ್ರ ನಾಗರಿಕ ವಿಮಾನಯಾನ ರಾಜ್ಯ ಸಚಿವ ಮುರಳೀಧರ್ ಮೊಹೋಲ್, ತನಿಖೆಯ ೧೫ ಪುಟಗಳ ಪ್ರಾಥಮಿಕ ವರದಿಯನ್ನು ಆಧರಿಸಿ ಯಾವುದೇ ತೀರ್ಮಾನಕ್ಕೆ ಬರುವುದು ಸೂಕ್ತವಲ್ಲ ಎಂದು ಹೇಳಿದ್ದಾರೆ.

**<><*<><>*><>**

ಭಾರತೀಯ ಕಾನೂನು ವ್ಯವಸ್ಥೆಯು ವಿಶಿಷ್ಟ ಸವಾಲುಗಳನ್ನು ಎದುರಿಸುತ್ತಿದೆ ಮತ್ತು ಅದನ್ನು ಸರಿಪಡಿಸುವ ಅಗತ್ಯವಿದೆ ಎಂದು ಭಾರತದ ಮುಖ್ಯ ನ್ಯಾಯಮೂರ್ತಿ ಭೂಷಣ್ ರಾಮಕೃಷ್ಣ ಗವಾಯಿ ಹೇಳಿದ್ದಾರೆ. ಹೈದರಾಬಾದ್‌ನ ಎನ್.ಎ.ಎಲ್.ಎಸ್.ಎ.ಆರ್ ಕಾನೂನು ವಿಶ್ವವಿದ್ಯಾಲಯದ ೨೨ನೇ ವಾರ್ಷಿಕ ಘಟಿಕೋತ್ಸವದಲ್ಲಿಂದು ಮಾತನಾಡಿದ ಅವರು, ನಮ್ಮ ಕಾನೂನು ವ್ಯವಸ್ಥೆ ಸರಿಪಡಿಸುವ ಅಗತ್ಯವಿದ್ದರೂ, ನಮ್ಮ ಜನ ಸವಾಲುಗಳನ್ನು ಎದುರಿಸಿ ನಿಲ್ಲುತ್ತಾರೆ ಎಂಬ ಆಶಾವಾದವಿದೆ ಎಂದು

ಹೇಳಿದರು.  ದೇಶ ಮತ್ತು ಅದರ ಕಾನೂನು ವ್ಯವಸ್ಥೆಯು, ವಿಚಾರಣೆಗಳಲ್ಲಿ ವಿಳಂಬದಂತಹ ವಿಶಿಷ್ಟ ಸವಾಲುಗಳನ್ನು ಎದುರಿಸುತ್ತಿದೆ, ಇದು ಕೆಲವೊಮ್ಮೆ ದಶಕಗಳವರೆಗೆ ಮುಂದುವರಿಯಬಹುದು. ಕೆಲವು ಪ್ರಕರಣಗಳ ವಿಚಾರಣೆಯಡಿಯಲ್ಲಿ ಜೈಲಿನಲ್ಲಿ ವರ್ಷಗಟ್ಟಲೆ ಕಳೆದ ನಂತರ ಕೆಲವರು ನಿರಪರಾಧಿ ಎಂದು ಕಂಡುಬಂದ ಘಟನೆಗಳೂ ಇವೆ ಎಂದು ಅವರು ಉಲ್ಲೇಖಿಸಿದ್ದಾರೆ.

<><*<><>*><>

ರಷ್ಯಾ ಇಂದು ಉಕ್ರೇನ್ ಮೇಲೆ ಬೃಹತ್ ವೈಮಾನಿಕ ದಾಳಿ ನಡೆಸಿದ್ದು, ಈ ತಿಂಗಳ ನಾಲ್ಕನೇ ಪ್ರಮುಖ ದಾಳಿಯಲ್ಲಿ ಸುಮಾರು ೬೦೦ ಡ್ರೋನ್‌ಗಳು ಮತ್ತು ೨೬ ಕ್ಷಿಪಣಿಗಳನ್ನು ಬಳಸಿದೆ. ದೇಶಾದ್ಯಂತ ನಗರಗಳನ್ನು ಗುರಿಯಾಗಿಸಿಕೊಂಡು ದಾಳಿ ನಡೆಸಲಾಗಿದ್ದು, ಎಲ್ವಿವ್, ಲುಟ್ಸ್ಕ ಮತ್ತು ಚೆರ್ನಿವ್ಟ್ಸಿ ಸೇರಿದಂತೆ ಪಶ್ಚಿಮ ಪ್ರದೇಶಗಳಲ್ಲಿ ತೀವ್ರ ಪರಿಣಾಮ ಉಂಟುಮಾಡಿದೆ. ರೊಮೇನಿಯನ್ ಗಡಿಯ ಬಳಿಯ ಚೆರ್ನಿವ್ಟ್ಸಿಯಲ್ಲಿ ಕನಿಷ್ಠ ಇಬ್ಬರು ಸಾವನ್ನಪ್ಪಿದ್ದು, ೨೦ ಜನರು ಗಾಯಗೊಂಡಿದ್ದಾರೆ. ನಾಗರಿಕ ಮೂಲಸೌಕರ್ಯಕ್ಕೆ ವ್ಯಾಪಕ ಹಾನಿಯಾಗಿದೆ ಎಂದು ಹೇಳಿರುವ ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್ಸ್ಕಿ ದಾಳಿಯನ್ನು ಖಂಡಿಸಿದ್ದಾರೆ.  ಉಕ್ರೇನ್‌ನ ವಾಯುಪಡೆಯು, ೨೫ ಕ್ಷಿಪಣಿಗಳು ಮತ್ತು ೩೧೯ ಶಹೆದ್ ಡ್ರೋನ್‌ಗಳನ್ನು ಹೊಡೆದುರುಳಿಸಿದೆ ಎಂದು ವರದಿ ಮಾಡಿದೆ, ಆದರೆ ೨೫೮ ಕ್ಕೂ ಹೆಚ್ಚು ಎಲೆಕ್ಟ್ರಾನಿಕ್ ಯುದ್ಧವನ್ನು ಜ್ಯಾಮ್ ಮಾಡಿದೆ.  ಏತನ್ಮಧ್ಯೆ, ಮಾಸ್ಕೋಗೆ ಹೋಗುತ್ತಿದ್ದ ೧೫೫ ಉಕ್ರೇನಿಯನ್ ಡ್ರೋನ್‌ಗಳನ್ನು ನಿನ್ನೆ ಹೊಡೆದುರುಳಿಸಲಾಗಿದೆ ಎಂದು ರಷ್ಯಾದ ರಕ್ಷಣಾ ಸಚಿವಾಲಯ ತಿಳಿಸಿದೆ. ಇತ್ತೀಚಿನ ದಾಳಿಯು ಉಕ್ರೇನ್‌ನ ಪ್ರದೇಶದೊಳಗೆ ರಷ್ಯಾ ದಾಳಿಗಳನ್ನು ಹೆಚ್ಚಿಸುತ್ತಿರುವುದಕ್ಕೆ ಸಾಕ್ಷಿಯಾಗಿದೆ. ಇದರ ನಡುವೆ ಅಮೆರಿಕ ಉಕ್ರೇನ್‌ಗೆ ರಕ್ಷಣಾ ಸಾಮಾಗ್ರಿಗಳ ಸರಬರಾಜನ್ನು ಪುನರಾರಂಭಿಸಿದೆ.

<><*<><>*><>

ಇಡೀ ಜಗತ್ತು ಇಂದು ಆಯುರ್ವೇದವನ್ನು ಅಳವಡಿಸಿಕೊಳ್ಳುತ್ತಿದೆ ಎಂದು ಕೇಂದ್ರ ಆಯುಷ್ ಸಚಿವ ಪ್ರತಾಪ್ ರಾವ್ ಜಾಧವ್ ಹೇಳಿದ್ದಾರೆ. ಗುಜರಾತ್‌ನ ಜಾಮ್‌ನಗರದಲ್ಲಿರುವ ಇನ್‌ಸ್ಟಿಟ್ಯೂಟ್ ಆಫ್ ಟೀಚಿಂಗ್ ಅಂಡ್ ರಿಸರ್ಚ್ ಇನ್ ಆಯುರ್ವೇದ-ಐಟಿಆರ್‌ಎಯ ಮೊದಲ ಘಟಿಕೋತ್ಸವ ಸಮಾರಂಭದಲ್ಲಿ ಭಾಗವಹಿಸಿ ಮಾನಾಡಿದ ಅವರು, ಪ್ರಪಂಚದಾದ್ಯಂತ ನಮ್ಮ ಪ್ರಾಚೀನ ವೈದ್ಯಕೀಯ ವ್ಯವಸ್ಥೆಯನ್ನು ಉತ್ತೇಜಿಸುವಲ್ಲಿ ಐಟಿಆರ್‌ಎ ಪ್ರಮುಖ ಕೊಡುಗೆ ನೀಡಿದೆ ಎಂದು ಹೇಳಿದರು.

<><*<><>*><>

ಲಂಡನ್‌ನ ಸೆಂಟರ್ ಕೋರ್ಟ್‌ನಲ್ಲಿಂದು ರಾತ್ರಿ ನಡೆಯಲಿರುವ ವಿಂಬಲ್ಡನ್ ಗ್ರ್ಯಾನ್ ಸ್ಲ್ಯಾಮ್ ಟೆನಿಸ್ ಪಂದ್ಯಾವಳಿಯ ಮಹಿಳಾ ಸಿಂಗಲ್ಸ್ ವಿಭಾಗದ ಫೈನಲ್‌ನಲ್ಲಿ ಐದು ಬಾರಿಯ ಗ್ರ್ಯಾಂಡ್ ಸ್ಲಾಂ ಚಾಂಪಿಯನ್ ಪೋಲ್ಯಾಂಡ್‌ನ ಇಗಾ ಸ್ವಿಯಾಟೆಕ್ ಹಾಗೂ ೧೩ನೇ ಶ್ರೇಯಾಂಕಿತ ಅಮೆರಿಕದ ಅಮಾಂಡಾ ಅನಿಸಿಮೋವಾ ಪ್ರಶಸ್ತಿಗಾಗಿ ಸೆಣಸಾಟ ನಡೆಸಲಿದ್ದಾರೆ. ಈ ಪಂದ್ಯ ಭಾರತೀಯ ಕಾಲಮಾನ ರಾತ್ರಿ ೮:೩೦ಕ್ಕೆ ಆರಂಭವಾಗಲಿದೆ.  ಪುರುಷರ ಸಿಂಗಲ್ಸ್ ವಿಭಾಗದ ಫೈನಲ್ ಪಂದ್ಯದ ನಾಳೆ ನಡೆಯಲಿದ್ದು, ವಿಶ್ವ ಅಗ್ರ ಶ್ರೇಯಾಂಕಿತ ಜಾನಿಕ್ ಸಿನ್ನರ್, ಎರಡನೇ ಶ್ರೇಯಾಂಕಿತ ಸ್ಪೇನ್‌ನ ಕಾರ್ಲೋಸ್ ಆಲ್ಕರಾಸ್ ವಿರುದ್ಧ ಪ್ರಶಸ್ತಿಗಾಗಿ ಸೆಣಸಾಟ ನಡೆಸಲಿದ್ದಾರೆ.

<><*<><>*><>

ಲಂಡನ್‌ನ ಲಾರ್ಡ್ಸ್‌ನಲ್ಲಿ ನಡೆಯುತ್ತಿರುವ ಆಂಡರ್ಸನ್-ತೆಂಡೂಲ್ಕರ್ ಟ್ರೋಫಿಯ ಮೂರನೇ ಟೆಸ್ಟ್‌ನ ೩ನೇ ದಿನವಾದ ಇಂದು ಭಾರತ ತಂಡವು, ಆತಿಥೇಯ ಇಂಗ್ಲೆಂಡ್ ವಿರುದ್ಧ ೩ ವಿಕೆಟ್‌ಗೆ ೧೪೫ ರನ್‌ಗಳೊಂದಿಗೆ ತನ್ನ ಮೊದಲ ಇನ್ನಿಂಗ್ಸ್ ಅನ್ನು ಪುನರಾರಂಭಿಸಿತು.  ಇತ್ತೀಚಿನ ವರದಿ ಬಂದಾಗ ಭಾರತ, ೫ ವಿಕೆಟ್ ನಷ್ಟಕ್ಕೆ ೩೧೬ ರನ್ ಮಾಡಿ ಆಡುತ್ತಿದೆ. ಕೆ.ಎಲ್.ರಾಹುಲ್ ಶತಕ ಬಾರಿಸಿ ಔಟ್ ಆದರು. ಇಂಗ್ಲೆಂಡ್ ತನ್ನ ಮೊದಲ ಇನ್ನಿಂಗ್ಸ್‌ನಲ್ಲಿ ೩೮೭ ರನ್‌ಗಳಿಗೆ ಆಲೌಟ್ ಆದ ನಂತರ, ಪ್ರವಾಸಿ ತಂಡವು ಪ್ರಸ್ತುತ ೭೧ ರನ್‌ಗಳ ಹಿನ್ನಡೆಯಲ್ಲಿದೆ.  ಐದು ಪಂದ್ಯಗಳ ಟೆಸ್ಟ್ ಸರಣಿಯು ಪ್ರಸ್ತುತ ೧-೧ ಸಮಬಲದಲ್ಲಿದೆ.

**<><*<><>*><>**

ಮರಳು ಮತ್ತು ಧೂಳಿನ ಬಿರುಗಾಳಿಗಳು ಈಗ ೧೫೦ ಕ್ಕೂ ಹೆಚ್ಚು ದೇಶಗಳಲ್ಲಿ ೩೩ ಕೋಟಿಗಿಂತಲೂ ಹೆಚ್ಚು ಜನರ ಮೇಲೆ ಪರಿಣಾಮ ಬೀರುತ್ತವೆ ಎಂದು ವಿಶ್ವಸಂಸ್ಥೆಯ ಹವಾಮಾನ ವಿಭಾಗ ತಿಳಿಸಿದೆ. ಇದು ಆರೋಗ್ಯ, ಆರ್ಥಿಕತೆ ಮತ್ತು ಪರಿಸರಕ್ಕೆ ಹೆಚ್ಚಿನ ಹಾನಿಯನ್ನುಂಟುಮಾಡುತ್ತದೆ. ವಾರ್ಷಿಕವಾಗಿ ಸುಮಾರು ೨೦೦ ಕೋಟಿ ಟನ್ ಧೂಳು ಹೊರಸೂಸುತ್ತದೆ. ಶೇಕಡಾ ೮೦ ಕ್ಕೂ ಹೆಚ್ಚು ಉತ್ತರ ಆಫ್ರಿಕಾ ಮತ್ತು ಮಧ್ಯಪ್ರಾಚ್ಯದ ಮರುಭೂಮಿಗಳಿಂದ ಉತ್ಪತ್ತಿಯಾಗಿದ್ದು, ಜಗತ್ತಿನಾದ್ಯಂತ ಚಲಿಸುತ್ತದೆ ಎಂದು ವಿಶ್ವಸಂಸ್ಥೆ ವರದಿ ಮಾಡಿದೆ.

**<><*<><>*><>**

ಮೇಘಾಲಯದಲ್ಲಿ ಒಂದು ಸಾವಿರದ ೮೭ ಕೋಟಿ ರೂಪಾಯಿ ಮೌಲ್ಯದ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಶಂಕುಸ್ಥಾಪನೆ ಮತ್ತು ಉದ್ಘಾಟನೆ ನೆರವೇರಿಸಿದರು. ಶಿಲ್ಲಾಂಗ್‌ನಲ್ಲಿರುವ ಅಂತಾರಾಷ್ಟ್ರೀಯ ಪ್ರದರ್ಶನ ಕಲೆಗಳು ಮತ್ತು ಸಂಸ್ಕೃತಿ ಕೇಂದ್ರದಲ್ಲಿ ನಡೆದ ಸಾರ್ವಜನಿಕ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ ಅವರು, ಬಂಡವಾಳ ಹೂಡಿಕೆಗಾಗಿ ರಾಜ್ಯಗಳಿಗೆ ವಿಶೇಷ ಸಹಾಯದ ಅಡಿಯಲ್ಲಿ ಹಂಚಿಕೆಯಾದ ೫ ಸಾವಿರದ ೪೦೦ ಕೋಟಿ ರೂಪಾಯಿಗಳನ್ನು ಮೇಘಾಲಯವು ಸಂಪೂರ್ಣವಾಗಿ ಬಳಸಿಕೊಂಡಿದೆ ಎಂದು ಹೇಳಿದರು. ಈಶಾನ್ಯ ರಾಜ್ಯಗಳ ಸಮಗ್ರ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರ ಗಮನಹರಿಸಿದೆ. ಮೇಘಾಲಯದಲ್ಲಿ ೫೪೦ ಕಿಲೋಮೀಟರ್‌ಗೂ ಹೆಚ್ಚು ರಸ್ತೆಗಳನ್ನು ನಿರ್ಮಿಸಲಾಗಿದೆ. ಜಲಜೀವನ್ ಮಿಷನ್, ಪ್ರಧಾನಮಂತ್ರಿ ಆವಾಸ್ ಯೋಜನೆ, ಪಿಎಂ-ಜೀವನ್ ಜ್ಯೋತಿ ಬಿಮಾ ಯೋಜನೆ, ಸ್ವಚ್ಛ ಭಾರತ್ ಸೇರಿದಂತೆ ಇತರೆ ಯೋಜನೆಗಳನ್ನು ಮೇಘಾಲಯ ಪೂರ್ಣ ಪ್ರಮಾಣದಲ್ಲಿ ಅನುಷ್ಠಾನಗೊಳಿಸಿದೆ ಎಂದು ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ತಿಳಿಸಿದರು.

**<><*<> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <>*><>**

**<><*<>ನಮ್ಮ ಮುಂದಿನ ವಾರ್ತಾ ಪ್ರಸಾರ ನಾಳೆ ಬೆಳಗ್ಗೆ ೭.೦೫ ಕ್ಕೆ <>*><>**